# ಬೋಧಕರ ವಿವರ

೦೧. **ಹೆಸರು** : ಎಂ. ಉಷಾ

೦೨. **ಜನ್ಮದಿನಾಂಕ** : ೧೨. ೦೫.೧೯೬೭

೦೩. **ವಿದ್ಯಾರ್ಹತೆ** : ಎಂ. ಎ., ಪಿ.ಎಚ್ ಡಿ (ಕನ್ನಡ ಸಾಹಿತ್ಯ)

೦೪. **ವಿಳಾಸ** : ಭಾಷಾಂತರ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ-ಹಂಪಿ,
ವಿದ್ಯಾರಣ್ಯಕಮಲಾಪುರ ೫೮೩ ೨೭೬ ಬಳ್ಳಾರಿ ಜಿಲ್ಲೆ

೦೫. **ಸ್ಥಿರ ದೂರವಾಣಿ** : ೦೮೩೯೪ ೨೪೧೩೩೭(೩೪೩)

೦೬. **ಇ-ಮೇಲ್** : ushanvith22@yahoo.com

೦೭. **ಕಾರ್ಯ ನಿರ್ವಹಿಸುತ್ತಿರುವ ವಿಭಾಗ** : ಭಾಷಾಂತರ ಅಧ್ಯಯನ ವಿಭಾಗ

೦೮. **ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹುದ್ದೆ** : ಸಹಪ್ರಾಧ್ಯಾಪಕ ಮತ್ತು ಮುಖ್ಯಸ್ಥ

೦೯. **ವಿಷಯ ತಜ್ಞತೆ :**

೧. ಭಾಷಾಂತರ ಅಧ್ಯಯನ,

೨. ಕನ್ನಡ ಸಾಹಿತ್ಯ

೩. ಮಹಿಳಾ ಅಧ್ಯಯನ

೧೦. **ಅಧ್ಯಯನ ನಡೆಸುತ್ತಿರುವ ಆಸಕ್ತಿಯ ಕ್ಷೇತ್ರಗಳು :**

೧. ಜಂಡರ್ ಸ್ಟಡೀಸ್

೨. ಸಾಹಿತ್ಯ ವಿಮರ್ಶೆ

೩. ೩.ಭಾಷಾಂತರ ದತ್ತ ಕಣಜ

೪. ೪.ಸಮೂಹ ಮಾಧ್ಯಮ

**೧೧. ಯೋಜನೆಯ ವಿವರಗಳು:**

೧೧.೧. **ಪೂರ್ಣಗೊಳಿಸಿದ ಸಾಂಸ್ಥಿಕ ಯೋಜನೆಗಳು**

೧೧.೧.೧ **ಮಹಿಳಾ ಸಾಹಿತ್ಯ ಗ್ರಂಥಸೂಚಿ** : ೧೯೯೮-೧೯೯೯ರಲ್ಲಿ ಮಹಿಳಾ ಅಧ್ಯಯನ ವಿಭಾಗದಲ್ಲಿ ಕೈಗೆತ್ತಿಕೊಳ್ಳಲಾದ ಈ ಯೋಜನೆಯು ಮಹಿಳಾ ಸಾಹಿತ್ಯ ಚರಿತ್ರ ರಚನೆಯ ಪೂರ್ವ ಸಿದ್ಧತಾ ಯೋಜನೆಯಾಗಿದೆ. ಕಾಲಾನುಕ್ರಮಣಿಕತೆಗೆ



PDF created with pdfFactory trial version www.pdffactory.com

ಅನುಗುಣವಾಗಿ ಮೂರು ಭಾಗಗಳಲ್ಲಿ ಮಾಹಿತಿ ಸಂಗ್ರಹಿಸಲಾಗಿರುವ ಈ ಯೋಜನೆಯಲ್ಲಿ ನಾನು ಮೂರನೆ ಭಾಗವಾದ ೧೯೭೫ರ ನಂತರದ ಕಾಲಘಟ್ಟಕ್ಕೆ ಸಂಬಂಧಿಸಿದ ಮಾಹಿತಿಯನ್ನು ನಿರ್ದಿಷ್ಟ ನಮೂನೆಯಲ್ಲಿ ಸಂಗ್ರಹಿಸಲಾಗಿದೆ.

**೧೧.೨. ಪೂರ್ಣಗೊಳಿಸಿದ ವೈಯಕ್ತಿಕ ಯೋಜನೆಗಳು :**

೧೧.೨.೧. **ಪತ್ರಿಕೆ ಮತ್ತು ಮಹಿಳೆ** ವಸಾಹತು ಸಂದರ್ಭದಲ್ಲಿ ಮುಖ್ಯವಾಗಿ ನಡೆಯುತ್ತಿದ್ದ ಮಹಿಳಾ ವಿಷಯಗಳನ್ನು ಕುರಿತ ಚರ್ಚೆಗಳಲ್ಲಿ ಅಂದಿನ ಕನ್ನಡ ಪತ್ರಿಕೆಗಳು ಭಾಗವಹಿಸುತ್ತಿದ್ದ ವಿಧಾನವನ್ನು ಈ ಅಧ್ಯಯನದಲ್ಲಿ ವಿಶ್ಲೇಷಣೆಗೊಳಪಡಿಸಲಾಗಿದೆ. ಮಹಿಳಾ ಶಿಕ್ಷಣ ಮತ್ತು ಉದ್ಯೋಗಕ್ಕೆ ಸಂಬಂಧಿಸಿದಂತೆ ಅಂದಿನ ಮುಖ್ಯಪತ್ರಿಕೆಗಳಾದ ಜಯಕರ್ನಾಟಕ, ಅಂತರಂಗ, ಜಯಂತಿ ಮುಂತಾದ ಪತ್ರಿಕೆಗಳು ಯಾವ ರೀತಿಯಲ್ಲಿ ಬರಹಗಳಿಗೆ ಅವಕಾಶ ಮಾಡಿಕೊಟ್ಟಿವೆ ಎನ್ನುವುದನ್ನು ಪರಿಶೀಲಿಸುವುದರೊಂದಿಗೆ ಈ ಬರಹಗಳ ತಾತ್ವಿಕತೆ ಯಾವ ಸ್ವರೂಪದ್ದು? ಹಾಗು ಈ ಬರಹಗಳು ರಾಷ್ಟ್ರೀಯ ಮಟ್ಟದಲ್ಲಿ ನಡೆಯುತ್ತಿದ್ದ ಚರ್ಚೆಗಳೊಂದಿಗೆ ಯಾವ ರೀತಿಯ ಸಂಬಂಧವನ್ನು ಹೊಂದಿದ್ದಾಗಿವೆ ಎಂಬುದನ್ನು ವಿಶ್ಲೇಷಿಸಲಾಗಿದೆ. ಈ ಅಧ್ಯಯನದಲ್ಲಿರುವ ಇನ್ನೊಂದು ಅಧ್ಯಾಯವು ವಸಾಹತು ಕಾಲದಲ್ಲಿ ಸ್ತ್ರೀವಾದವನ್ನು ಕುರಿತಂತೆ ಪತ್ರಿಕೆಗಳಲ್ಲಿ ಯಥೇಚ್ಛವಾಗಿ ಕಾಣಿಸಿಕೊಂಡಿರುವ ಅಣಕುಗಳನ್ನು ಅಧ್ಯಯನಕ್ಕೊಳಪಡಿಸಿದ್ದು, ಇದು ವಸಾಹತು ಸಂದರ್ಭದ ಮಹಿಳೆಯರ ಕುರಿತಾದ ದ್ವಿಮುಖ ನಿಲುವನ್ನು ಅರಿಯುವಲ್ಲಿ ಉಪಯುಕ್ತವಾದುದಾಗಿದೆ.

೧೧.೨.೨ **ಸಂಸ್ಕೃತಿ ಚಿಂತನೆ ಮತ್ತು ಭಾರತೀಯ ಸ್ತ್ರೀವಾದ** ೧೯೯೯-೨೦೦೦ದಲ್ಲಿ ಕೈಗೊಳ್ಳಲಾದ ಈ ಯೋಜನೆಯಲ್ಲಿ ಸಮಕಾಲೀನ ಸಂದರ್ಭದಲ್ಲಿ ವ್ಯಾಪಕವಾಗಿ ಕಂಡು ಬರುತ್ತಿರುವ ಸಂಸ್ಕೃತಿ ಚಿಂತನೆಯು ಭಾರತೀಯ ಸ್ತ್ರೀವಾದವನ್ನು ಪರಿಭಾವಿಸುತ್ತಿರುವ ವಿಧಾನವನ್ನು ವಿಶ್ಲೇಷಿಸಲಾಗಿದೆ. ಭಾರತದ ಸ್ತ್ರೀವಾದಿ ಹೋರಾಟವನ್ನು ಪಶ್ಚಿಮಮುಖಿಯಾದ ನಗರ ಕೇಂದ್ರಿತ ಮಧ್ಯಮವರ್ಗದ ಮಹಿಳೆಯರ ಚಟುವಟಿಕೆಯಾಗಿ(ಗೋಳಾಟವಾಗಿ) ವ್ಯಾಖ್ಯಾನಿಸುವ ಭಾರತದ ಸಂಸ್ಕೃತಿ ಚಿಂತನೆಯು ಉಪಸಂಸ್ಕೃತಿ, ತಳ ಸಂಸ್ಕೃತಿ, ಅಂಚಿನ ಸಂಸ್ಕೃತಿಗಳ ಪರವಾದ ತಾತ್ವಿಕತೆಯನ್ನು ಸ್ವೀಕರಿಸಿರುವ ಸಂದರ್ಭದಲ್ಲಿಯೂ ಸ್ತ್ರೀವಾದದ ಬಗ್ಗೆ ಪ್ರಕಟಪಡಿಸುತ್ತಿರುವ ಅವಜ್ಞೆ, ಅಸಹನೆ, ಅಪಮೌಲ್ಯಮಾಪನಗಳ ಬಗ್ಗೆ ಈ ಅಧ್ಯಯನವು ಬೆಳಕು ಚೆಲ್ಲುತ್ತದೆ.

೧೧.೨.೩ **ಮಹಿಳಾ ಚಳುವಳಿ ಮತ್ತು ಮಹಿಳಾ ವಿಷಯಗಳು** ಮಹಿಳಾ ಅಧ್ಯಯನ ಎಂ.ಎ., ಎಂ.ಫಿಲ್., ವಿದ್ಯಾರ್ಥಿಗಳ ಶೈಕ್ಷಣಿಕ ಅಗತ್ಯವನ್ನು ಗಮನದಲ್ಲಿಟ್ಟುಕೊಂಡು ರೂಪಿಸಲಾಗಿರುವ ಈ ಅಧ್ಯಯನವು ಮಹಿಳಾ ಚಳುವಳಿಯನ್ನು ಸಮಾಜಶಾಸ್ತ್ರೀಯವಾದ ಅಧ್ಯಯನಕ್ಕೆ ಒಳಪಡಿಸುತ್ತಲೇ ಅದಕ್ಕೆ ಸಂಬಂಧಪಟ್ಟ ಹೇರಳವಾದ ಮಾಹಿತಿಯನ್ನು ವ್ಯವಸ್ಥಿತವಾದ ವಿಶ್ಲೇಷಣೆಯೊಂದಿಗೆ ಓದುಗರಿಗೆ ಒದಗಿಸಲು ಬಯಸುತ್ತದೆ. ಈಗಾಗಲೇ ರೂಪುಗೊಂಡಿರುವ ಮಹಿಳಾ ಚಳುವಳಿಯ ಸಂಕಥನವು ಕಾಲಾನುಕ್ರಮಣಿಕೆಯನ್ನು ಪ್ರಧಾನವಾಗಿ ಹೊಂದಿದ್ದರೆ, ಪ್ರಸ್ತುತದ ಸಂಕಥನವು ವಿಷಯಾಧಾರಿತವಾಗಿ ರಚನೆಗೊಂಡುದಾಗಿದೆ. ಸುಮಾರು ಇನ್ನೂರು ವರ್ಷಗಳ ಇತಿಹಾಸ ಹೊಂದಿರುವ ಭಾರತದ ಮಹಿಳಾ ಚಳುವಳಿಯು ಮಹಿಳಾ ವಿಷಯ ಪ್ರಧಾನವಾಗಿಯೇ ತನ್ನನ್ನು ರೂಪಿಸಿಕೊಂಡಿರುವುದರಿಂದ ಈ ಚಳುವಳಿಯ ಒಟ್ಟುನೋಟವೊಂದನ್ನು ಅರಿಯಲು, ಅದರ ಸೋಲು-ಗೆಲುವನ್ನು ವಿವರಿಸಿಕೊಳ್ಳಲು ಈ ವೈಧಾನಿಕತೆಯು



PDF created with pdfFactory trial version www.pdffactory.com

ಉಪಯುಕ್ತವಾದುದು. ಅಧ್ಯಯನದ ಕೊನೆಯಲ್ಲಿ ಮಹಿಳಾ ಚಳುವಳಿಯ ಸಮಕಾಲೀನ ಬಿಕ್ಕಟ್ಟುಗಳನ್ನು ಮಂಡಿಸಲಾಗಿದೆ.

೧೧.೨.೪ **ಮಹಿಳೆ ಮತ್ತು ಜಾತಿ: ಒಂದು ಸೈದ್ಧಾಂತಿಕ ಗ್ರಹಿಕೆ** ಮಂಡಲ್ ವರದಿಯ ನಂತರ ಮಹಿಳಾ ಚಳುವಳಿಯಲ್ಲಿ ಪ್ರಮುಖವಾಗಿ ಕಾಣಿಸಿಕೊಂಡ ಜಾತಿಯ ಪ್ರಶ್ನೆಯನ್ನು ಗಮನದಲ್ಲಿಟ್ಟುಕೊಂಡು ಮಹಿಳೆ ಮತ್ತು ಜಾತಿಯ ಸಂಬಂಧವನ್ನು ಭಾರತೀಯ ಚಿಂತನೆಗಳು ಗ್ರಹಿಸಿರುವ ಕ್ರಮವನ್ನು ವಿಶ್ಲೇಷಿಸುವ ಉದ್ದೇಶ ಈ ಯೋಜನೆಯದು. ಭಾರತೀಯ ಪುರುಷ ಪ್ರಧಾನತೆ ಮತ್ತು ಜಾತಿ ಪದ್ಧತಿಗಳ ನಡುವಿನ ಸಂಬಂಧವನ್ನು ಅಂಬೇಡ್ಕರ್, ಪೆರಿಯಾರ್, ಫುಲೆ ಮುಂತಾದವರು ವಿವರಿಸುವ ಕ್ರಮ, ಹಾಗು ಜಾತಿ ಪ್ರಶ್ನೆಯನ್ನು ಭಾರತದ ಮಹಿಳಾ ಚಳುವಳಿಗಳು ಉಪೇಕ್ಷಿಸಿರುವ ಕ್ರಮವನ್ನು ಇಲ್ಲಿ ಸೈದ್ಧಾಂತಿಕವಾಗಿ ಚರ್ಚಿಸಲಾಗಿದೆ.

೧೧.೨.೫ **ಆಧುನಿಕ ಮಹಿಳಾ ಸಾಹಿತ್ಯ : ಇನ್ನಷ್ಟು ಶೋಧ** ಕಳೆದ ಮುವತ್ತು ವರ್ಷಗಳಿಂದ ಕನ್ನಡ ಮಹಿಳಾ ಸಾಹಿತ್ಯದ ಸಂದರ್ಭದಲ್ಲಿ ನಡೆಯುತ್ತಿರುವ ಪಾಯ ಸಂಶೋಧನೆಯನ್ನು ಈ ಭಿನ್ನ ವೈಧಾನಿಕತೆಯೊಂದಿಗೆ ಈ ಅಧ್ಯಯನವು ಮುಂದುವರಿಸಿದ್ದಾಗಿದೆ. ಇದುವರೆಗಿನ ಸಂಶೋಧನೆಯು ಮಹಿಳಾ ಸಾಹಿತ್ಯ ಪರಂಪರೆಯ ನಿರ್ಮಾಣದ ಆಶಯದೊಂದಿಗೆ ಬದುಕು-ಬರಹ ದ ವೈಧಾನಿಕತೆಯನ್ನು, ಅನುಸರಿಸಿ ರೂಪುಗೊಂಡದ್ದಾಗಿದೆ. ಪ್ರಧಾನಧಾರೆಯ ಶ್ರೇಷ ತೆಯ ಸಾಹಿತ್ಯ ರಾಜಕಾರಣವನ್ನು ಅದರ ಮೂಲಕವೇ ಒಡೆಯಲು ಬಯಸಿದ್ದಾಗಿದೆ. ಆದರೆ ಪ್ರಸ್ತುತ ಶೋಧವು ಈ ಮಾದರಿಯೊಂದಿಗೆ ಭಿನ್ನಮತವನ್ನು ಹೊಂದ್ದಾಗಿದೆ. ಹಾಗಾಗಿಯೇ ಇದು ನಿರ್ಲಕ್ಷ್ಯಕ್ಕೊಳಪಟ್ಟ ಪತ್ರಿಕ ಸಾಹಿತ್ಯವನ್ನು ಸಂಪಾದಿಸಿ ಅದರ ಮೂಲಕವೇ ಸ್ವಾತಂತ್ರ್ಯ ಪೂರ್ವದ ಅರ್ಧದಶಕದ ಮಹಿಳಾ ಸಾಹಿತ್ಯವನ್ನು ವಿವರಿಸಿಕೊಳ್ಳಲು ಬಯಸುತ್ತದೆ. ಈ ಅಧ್ಯಯನಕ್ಕೆ ಪೂರಕವಾಗಿ ೧೯೩೦-೪೦ರ ದಶಕದ ಸನ್ನಕಥೆ ಮತ್ತು ಕಾವ್ಯವನ್ನು ಸಂಪಾದಿಸಲಾಗಿದ್ದು, ಸುಮಾರು ೬೦ ಪುಟಗಳ ದೀರ್ಘ ಮುನ್ನುಡಿಯನ್ನು ಬರೆಯಲಾಗಿದೆ.

೧೧.೨.೬ **ಕನ್ನಡ-ಹಿಂದಿ ಭಾಷಾಂತರ ಪ್ರಕ್ರಿಯೆಗಳು** ಈ ಯೋಜನೆಯು ಮುಖ್ಯವಾಗಿ ಆಕರ ಸಂಗ್ರಹಣೆಯನ್ನು ಉದ್ದೇಶವಾಗಿ ಹೊಂದಿದ್ದು,ಕನ್ನಡ ಮತ್ತು ಹಿಂದಿ ಭಾಷೆಗಳ ನಡುವೆ ನಡೆದಿರುವ ಭಾಷಾಂತರ ಚಟುವಟಿಕೆಯನ್ನು ಗಮನಿಸುತ್ತ, ಅದಕ್ಕೆ ಸಂಬಂಧಪಟ್ಟ ಗ್ರಂಥಸೂಚಿಯನ್ನು ನಿರ್ಮಿಸಿದೆ. ಈ ಯೋಜನೆ ವಿಭಾಗದಲ್ಲಿರುವ ದತ್ತಕಣಜ ಯೋಜನೆಗೆ ಪೂರಕವಾಗಿ ರೂಪುಗೊಂಡದ್ದಾಗಿದೆ.

೧೨. **ಪ್ರಗತಿಯಲ್ಲಿರುವ ಯೋಜನೆಗಳು:**

೧೨.೧. **ಭಾಷಾಂತರ ಮತ್ತು ಲಿಂಗರಾಜಕರಣ:** ಭಾಷಾಂತರವು ಎರಡು ಭಾಷೆ ನಡುವೆ ನಡೆಯುವ ಚಟುವಟಿಕೆಯಾಗಿದ್ದು, ಇದು ಮುಖ್ಯವಾಗಿ ಸಾಂಸ್ಕೃತಿಕ ವಿನಿಮಯವನ್ನು ಮಾಡುತ್ತದೆ ಎಂಬ ಸಿದ್ಧಾಂತವನ್ನು ಗಮನದಲ್ಲಿಟ್ಟುಕೊಂಡು ಕನ್ನಡದ ಭಾಷಾಂತರ ಚಟುವಟಿಕೆಯು ಮಾಡಿರುವ ಸಾಂಸ್ಕೃತಿಕ ವಿನಿಮಯದಲ್ಲಿನ ಲಿಂಗತ್ವದ ರಾಜಕಾರಣವನ್ನು ವಿಶ್ಲೇಷಿಸುವುದು ಈ ಅಧ್ಯಯನದ ಉದ್ದೇಶವಾಗಿದೆ. ಭಾಷಾಂತರ ಪಠ್ಯಗಳು ಕೂಡ ಮೂಲಪಠ್ಯಗಳಂತೆಯೇ ತನ್ನದೇ ಆದ ಸಾಂಸ್ಕೃತಿಕ ರಾಜಕಾರಣದಲ್ಲಿ ನಿರತವಾಗಿರುತ್ತದೆ ಅಥವಾ ತನ್ನ ಕಾಲದ ಯಾವುದೋ ಒಚಿದು ಸಾಂಸ್ಕೃತಿಕ



PDF created with pdfFactory trial version www.pdffactory.com

ರಾಜಕಾರಣದಲ್ಲಿ ತನ್ನನ್ನು ಗುರುತಿಸಿಕೊಂಡಿರುತ್ತದೆ ಎಂಬ ಅಂಶವನ್ನು ವಸಾಹತು ಸಂದರ್ಭದ ಭಾಷಾಂತರಗಳು ಕೈಗೊಂಡ ಲಿಂಗರಾಜಕಾರಣದ ಮೂಲಕ ತೋರಿಸಿಕೊಡುವುದು ಈ ಅಧ್ಯಯನದ ಉದ್ದೇಶವಾಗಿದೆ.

೧೨.೨. **ಕನ್ನಡದಲ್ಲಿ ಶೈಕ್ಷಣಿಕ ಸಾಮಗ್ರಿ ನಿರ್ಮಾಣದ ಉಪಕ್ರಮ:** ಶಿಕ್ಷಣದ ಎಲ್ಲ ಹಂತಗಳಲ್ಲಿ ಕನ್ನಡವನ್ನು ಸಮರ್ಥವಾಗಿ ಬಳಸುವಂತಾಗಬೇಕೆನ್ನುವುದು

**೧೩. ಪ್ರಕಟಣೆಗಳು:**

**೧೩.೧. ವಿಶ್ವವಿದ್ಯಾಲಯದಿಂದ ಪ್ರಕಟಿತ ಕೃತಿಗಳು:**

೧೩.೧.೧.ಪತ್ರಿಕೆ ಮತ್ತು ಮಹಿಳೆ(ನೋಡಿ.೧೧.೨.೧)

೧೩.೧.೨.ಸಂಸ್ಕೃತಿ ಚಿಂತನೆ ಮತ್ತು ಭಾರತೀಯ ಸ್ತ್ರೀವಾದ(ನೋಡಿ.೧೧.೨.೨)

೧೩.೧.೩.ಮಹಿಳಾ ಚಳುವಳಿ ಮತ್ತು ಮಹಿಳಾ ವಿಷಯಗಳು(ನೋಡಿ. ೧೧.೨.೩.

೧೩.೧.೪.ಮಹಿಳೆ ಮತ್ತು ಜಾತಿ (ನೋಡಿ. ೧೧.೨.೪)

**೧೩.೨. ವೈಯಕ್ತಿಕ ಪ್ರಕಟಣೆಗಳು:**

೧೩.೨.೧. ಒಳಗಣ ರಣರಂಗ, ಹೊರಗಣ ಶೃಂಗಾರ (೧೯೯೯)ವಿಶ್ವಾಲಯ ಬೆಂಗಳೂರು:

೧೩.೨.೨. ಸುರುಚಿ (೨೦೦೧) ಸಿವಿಜಿ ಪಬ್ಲಿಕೇಷನ್ ಬೆಂಗಳೂರು

**೧೩.೩. ಸಂಪಾದಿತ ಕೃತಿಗಳು**

೧೩.೩.೧ ಮಹಿಳಾ ಅಧ್ಯಯನ(ಷಾಣ್ಮಾಸಿಕ ಶೈಕ್ಷಣಿಕ ಪತ್ರಿಕೆ) ಸಂ.೫ ಸಂ೧-೨ ಕನ್ನಡ ವಿಶ್ವವಿದ್ಯಾಲಯ-ಹಂಪಿ

೧೩.೩.೨ ಆಧುನಿಕ ಮಹಿಳಾ ಸಾಹಿತ್ಯ; ಇನ್ನಷ್ಟು ಶೋಧ: (ನೋಡಿ. ೧೧.೨.೫.)

**೧೪ ಪ್ರಕಟಿತ ಪ್ರಮುಖ ಹತ್ತು ಲೇಖನಗಳು**

೧೪.೧. '*ವಿಕ್ರಮಾರ್ಜುನ ವಿಜಯ: ಒಂದು ಸ್ತ್ರೀವಾದಿ ಓದು*' ಕನ್ನಡ ಅಧ್ಯಯನ ಸಂ.೯-೨ ಕನ್ನಡ ವಿಶ್ವವಿದ್ಯಾಲಯ-ಹಂಪಿ೨೦೦೨

೧೪.೨. '*ಕನ್ನಡದ ಮೊದಲ ವಸ್ತುನಿಷ್ಠ ವಿಮರ್ಶೆಯ ಸುತ್ತ*' ಸಂಕ್ರಮಣ ಸಂ.೩೫-೫, ಬೆಂಗಳೂರು

೧೪.೩. '*ಶಾಸ್ತ್ರ ಅವರಿಗಿರಲಿ, ಕಲೆ ನಮಗಿರಲಿ*' -ಮಹಿಳಾ ಜಾನಪದ(ಸಂ) ಕೆ.ಆರ್. ಸಂಧ್ಯಾರೆಡ್ಡಿ ,ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ,ಬೆಂಗಳೂರು ೨೦೦೩

೧೪.೪. '*Status of rural women in Karnataka :ಒಂದು ಪರಿಚಯ*'-ಅಭಿವೃದ್ಧಿ ಅಧ್ಯಯನ



PDF created with pdfFactory trial version www.pdffactory.com

ಸಂ.೩-೧ ಕನ್ನಡ ವಿಶ್ವವಿದ್ಯಾಲಯ-ಹಂಪಿ೨೦೦೪

೧೪.೫. ‘ *ಹಸ್ತಪ್ರತಿಶಾಸ್ತ್ರ: ಹೊಸ ಅಧ್ಯಯನ ಸಾಧ್ಯತೆಗಳು* ’-ಹಸ್ತಪ್ರತಿಶಾಸ್ತ್ರ ಅಧ್ಯಯನ(ಸಂ)೨- ೧

ವಿಶ್ವವಿದ್ಯಾಲಯ-ಹಂಪಿ೨೦೦೫

೧೪.೬. ‘*ಮಹಿಳಾ ಸಾಹಿತ್ಯ, ಆಧುನಿಕತೆ ಮತ್ತು ಸದ್ಗುಣಿ ಕೃಷ್ಣಾಬಾಯಿ* ’-ಮಾನಸ (ಮಹಿಳಾ ಮಾಸಪತ್ರಿಕೆ)

ಬೆಂಗಳೂರು,ಡಿಸೆಂಬರ್೨೦೦೫

೧೪.೭. ‘**ಮ***ಹಿಳೆ ಮತ್ತು ಅಂಬೇಡ್ಕರ್ ಚಿಂತನೆ* ’-ದಲಿತ ಅಧ್ಯಯನ(ಸಂ)ಟಿ.ಆರ್ ಚಂದ್ರಶೇಖರ

ವಿಶ್ವವಿದ್ಯಾಲಯ-ಹಂಪಿ೨೦೦೫

೧೪.೮. ‘*ಜಪಾನಿನ ಕಲೆ ಮತ್ತು ಮನಸ್ಸು* ’(ಅನು)ಹಿಸ್ಟರಿ ಆಫ್ ಸಿವಿಲೈಜೇಷನ್, ವಿಲ್ ಡೂರಾಂಟ್,

ಕರ್ನಾಟಕ ಅನುವಾದ ಅಕಾಡೆಮಿ, ಬೆಂಗಳೂರು ೨೦೦೭

೧೪.೯. ‘ಪ್ರಮೀಳಾರ್ಜುನೀಯಂ: *ಭಾಷಾಂತರದ ಸ್ಥಳೀಕರಣ ಮತ್ತು ಲಿಂಗರಾಜಕಾರಣ*’ ಮಹಿಳಾ

ಅಧ್ಯಯನ, ಸಂ.೮-೨ಕನ್ನಡ ವಿಶ್ವವಿದ್ಯಾಲಯ,ಹಂಪಿ-೨೦೦೭

೧೪.೧೦. ‘*ಮಹಿಳಾ ಸಾಹಿತ್ಯ ಮತ್ತು ಚರಿತ್ರ ರಚನಾಕ್ರಮ* ’ ಕನ್ನಡದೊಳ್ ಭಾವಿಸಿದ ಜನಪದಂ

ವಸು.ಎಂ.ವಿ.(ಸಂ) ೨೦೦೯

**೧೫. ಪಿ ಎಚ್. ಡಿ ಮಾರ್ಗದರ್ಶನ**

೧೫.೧. ವೆಂಕಟೇಶ, ‘**ನಗರ ಮತ್ತು ಗ್ರಾಮೀಣ ರಾಜಕಾರಣದಲ್ಲಿ ಮಹಿಳೆ**’ ನವೆಂಬರ್ ೧೮, ೨೦೦೩

೧೫.೨. ಜಿ.ಎನ್ ಸಂಗೀತ, ‘Role of Women’s Organizations for Empowerment of

Distressed Women in Karnataka’, ಜೂನ್ ೧೭, ೨೦೦೪

೧೫.೩. ಗೀತಾಮಲ್ಲೇಶಪ್ಪ ‘**ಆಧುನಿಕ ಕುಟುಂಬಗಳಲ್ಲಿ ಪಿತೃಪ್ರಧಾನತೆಯ ಸ್ವರೂಪ**’ ಮಾರ್ಚ್೨೦, ೨೦೦೮

೧೫.೪. ಗಜಾನನ ಅಡ್ಕಾರ ‘ಬಿಎಂಶ್ರೀ ಪೂರ್ವದ ಭಾಷಾಂತರಗಳು’ಅಕ್ಟೋಬರ್ ೨೦೦೯

**೧೬. ಎಂ.ಫಿಲ್. ಮಾರ್ಗದರ್ಶನ**

೧೬.೧. ಶಿವಪ್ಪ **ಮಹಿಳೆ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರ** ೨೦೦೩

೧೬.೨. ಗೀತಾ ಮಲ್ಲೇಶಪ್ಪ **ಹೆಣ್ಣುಮಕ್ಕಳ ವಿವಾಹ ವಯಸ್ಸು:ಒಂದು ಅಧ್ಯಯನ** ೨೦೦೩



PDF created with pdfFactory trial version www.pdffactory.com

೧೬.೩. ಸತ್ಯಮೂರ್ತಿ.ಬಿ. **ಕನ್ನಡದಲ್ಲಿ ಭಾಷಾಂತರ ಚಿಂತನೆಗಳು** ೨೦೦೭

೧೬,೪. ತಿಪ್ಪೇಶಪ್ಪ ಕನ್ನಡದಲ್ಲಿ ಪುನರ್ಲೇಖ ಪ್ರಕ್ರಿಯೆ ೨೦೦೯

**೧೭. ನಿರ್ವಹಿಸಿದ ಇತರೆ ಕೆಲಸಗಳು**

**೧೭.೩. ಆಡಳಿತಾತ್ಮಕ**

೧೭.೩.೧.ಉಪನಿರ್ದೇಶಕರು ಅಧ್ಯಯನಾಂಗ (೦೧.೦೮.೨೦೦೭ ರಿಂದ ೨೮.೦೬.೨೦೦೮ರವರೆಗೆ)

೧೭.೩.೨.ವಾರ್ಡನ್ ಅಸ್ಮಿತ ವಸತಿ ನಿಲಯ (೨೭.೧೦.೨೦೦೭ ರಿಂದ ೨೬.೨.೨೦೧೦ರವರೆಗೆ)

**೧೭.೪. ಹೆಚ್ಚಿನ ಜವಾಬ್ದಾರಿಗಳು**

೧೭.೪.೧.ಶ್ರೀ ಅಭೇರಾಜ್ ಬಲ್ದೋಟ ಜೈನ ಸಂಸ್ಕೃತಿ ಅಧ್ಯಯನ ಪೀಠ (೨೦೦೪ರಿಂದ ೨೦೦೭)



PDF created with pdfFactory trial version www.pdffactory.com